

**ಬೆತ್ತಲೆ ಗೊಮ್ಮಟನಿಗೂ ಮಳೆಸ್ನಾನವೆಂದರೆ ಪುಳಕ...**
ವರ್ಷವಿಡೀ ಬಿರುಬಿಸಿಲಲ್ಲಿ ನಿಂತು ಕಾದು ಬೇಸತ್ತ ಕಾರ್ಕಳದ ಗೊಮ್ಮಟನಿಗೂ ಮೊದಲ ಮಳೆ ಮೈಮೇಲೆ ಬಿದ್ದಾಗ ಖುಷಿಯಾಗದಿರುವುದೇ? ಮೋಡ ಕಟ್ಟಿ ಸುರಿವ ಮಳೆ ಸುತ್ತೆಲ್ಲ ಹಸಿರ ಚಿಗುರಿಸಿದಾಗ ಮುಖದ ಮೇಲಿನ ಮಂದಹಾಸ ತುಸುವೇ ಹಿಗ್ಗಬಹುದೇ? ಹಿಂದೆಂದೋ ತೆಗೆದ ಈ ಚಿತ್ರನೋಡಿ ಜಲಸಮೃದ್ಧಿಯ ಕುರಿತು ಕಲ್ಪನಾವಿಲಾಸ ಸಾಗುತ್ತಿರುವ ಹಾಗೆಯೇ ಮಂಜುನಾಥನ ನೇತ್ರಾವತಿ ಬತ್ತಿಹೋಗಿರುವ ವಾಸ್ತವ ಸಿಡಿಲಿನಂತೆ ಎರಗಿದರೆ ಏನೆನ್ನೋಣ...



ಆಯ್ತು ಮುಂಡುಗನ ಭತ್ತ ಬೆಳೆದು. ಈಗ ಬೀಜ ಕೂಡ ಸಿಗಲ್ಲ. ಉಪ್ಪು ಹಾಕಿಕೊಂಡು ತಿಂದ್ರೂ ಏವನ್ ರುಚಿ ಇರುತಿತ್ತು' ಎಂದು ಕನಕಪುರದ ಕೊಳಗಂಡನಹಳ್ಳಿ ನಾಗರಾಜು ಕಳೆದುಹೋದ ದಿನಗಳ ನೆನಪು ಮಾಡಿಕೊಳ್ಳುತ್ತಾರೆ.

ಒಣಭೂಮಿ ಭತ್ತದ ಕೃಷಿ ಬಯಲುಸೀಮೆಯಲ್ಲಿ ಸಂಪೂರ್ಣವಾಗಿ ಕಣ್ಮರೆಯಾಗಿದೆ. ಚೌಳು ನೆಲದ ಭತ್ತದ ತಳಿಗಳೂ ಅವಸಾನದ ಜಾಡು ಹಿಡಿದಿವೆ.

ಬದಲಾದ ಮಳೆಗಾಲಕ್ಕೆ ಅಷ್ಟಿಷ್ಟು ಹೊಂದಿಕೊಂಡಿರುವುದೆಂದರೆ ರಾಗಿಯೇ. ದೊಡ್ಡ ಹಸಲೆ (ಪುನರ್ವಸು) ಮಳೆಗೆ ಬಿತ್ತನೆಯಾಗಬೇಕಿದ್ದ ರಾಗಿ ಬಿತ್ತನೆ ಚಿಕ್ಕ ಹಸಲೆಗೆ ವರ್ಗಾವಣೆಗೊಂಡಿದೆ. ಒಮ್ಮೊಮ್ಮೆ ಹಸಲೆ ಮಳೆಗೂ ಬಿತ್ತುವುದುಂಟು. ದೀಪಾವಳಿಯ ಹೊತ್ತಿಗೆ ರಾಗಿ ತೆನೆ ಒಡೆಯಲು ಶುರುವಾಗಿ ಹೂ ಆಡುತಿತ್ತು. ಆಗ ತೆನೆಗಳು ಜಡಿಮಳೆಗೆ ಸಿಕ್ಕಿ ಇಲುಕು ರೋಗಕ್ಕೆ ತುತ್ತಾಗುತ್ತಿದ್ದವು. ಈಗ ಬಿತ್ತನೆಯೇ ನಿಧಾನವಾಗುತ್ತಿರುವುದರಿಂದ ಜಡಿಮಳೆಗೆ ಸಿಗುವ ಸಂಭವ ಕಡಿಮೆ. ಒಂದೆರಡು ತಿಂಗಳು ಮಳೆ ಇಲ್ಲದೆ ಇಡೀ ಹೊಲ ಒಣಗಿ ಹೋದರೂ, ಮತ್ತೆ ಮಳೆ ಬಂದಾಗ ಎದ್ದು ನಿಲ್ಲುವ ಶಕ್ತಿ ರಾಗಿಗಿದೆ. ರಾಗಿ ಕೃಷಿ ಮತ್ತೆ ಮುನ್ನೆಲೆಗೆ ಬರುತ್ತಿದೆ.

ಬಯಲುಸೀಮೆಯ ಮಳೆಗಾಲ ಅನೇಕ ಉಪ ಚಟುವಟಿಕೆಗಳಿಗೆ ಮುನ್ನುಡಿ ಬರೆಯುತ್ತಿತ್ತು. ಅಣಬೆ ಹುಡುಕುವವರು, ಹುತ್ತದ ಈಚಲು ಸಂಗ್ರಹಿಸಿ ಉಪ್ಪುಕಾರ ಹಾಕಿ ಚಪ್ಪರಿಸುವವರು, ಬಿದಿರು ಕಳಲೆಗೆ ಮನಸೋತವರು, ಗೆಡ್ಡೆ ಗೆಣಸು ಪ್ರಿಯರು ಮಳೆಗಾಲ ಬರುವುದನ್ನೇ ಕಾಯುತ್ತಿದ್ದರು. 'ಹಳ್ಳದಾಗೆ ಕುಡುಮೆ ಹಾಕಿದರೆ, ಬುಟ್ಟಿ ತುಂಬ ಮೀನು ಸಿಗ್ತಿತ್ತು. ಈಗ ಮಳೇನೂ ಇಲ್ಲ; ಮೀನೂ ಇಲ್ಲ' ಎಂದು ಮಧುಗಿರಿಯ ಪುಲಮಾಚಿ ಪಾತಣ್ಣ ಕಳೆದುಹೋದ ಮಳೆ ವೈಭವವನ್ನು ಬಣ್ಣಿಸುತ್ತಾರೆ. ದೂಳು ಹಿಡಿದ ಕುಡುಮೆ ಗೋಡೆಯ ಗೂಟದಲ್ಲಿ ಭದ್ರವಾಗಿದೆ.

ಹಳ್ಳದ ದಡದ ಮರಳನ್ನು ಬೊಗಸೆಯಲ್ಲಿ ಮೊಗಚಿಹಾಕಿ, ಗುಂಡಿ ಮಾಡಿದರೆ ಜಿನುಗಿ ಬರುತ್ತಿದ್ದ ಜಲಧಾರೆಯ 'ಚಿಲುಮೆ', ಕೆರೆಯ ಅಂಗಳದಲ್ಲಿ ಉಕ್ಕಿ ಹರಿದು, ಬೇಸಿಗೆಯಲ್ಲೂ ನೀರು ಕೊಡುತ್ತಿದ್ದ ತಲಪರಿಗೆ, ನೆಲದೊಳಗಿನ ನೀರು ಹೊರಬೀಳುವ 'ಊಟೆ', ಕಾಲಿಟ್ಟರೆ ಕುಸಿಯುತ್ತಿದ್ದ ಜೌಗಿನ 'ಉಸುಬು' ಗ್ರಾಮೀಣರ ಶಬ್ದಕೋಶದಿಂದ ಮರೆಯಾಗಿವೆ. ಈಗಿನ ಯುವಜನಾಂಗಕ್ಕೆ ಈ ಪದಗಳ ಪರಿಚಯವೇ ಇಲ್ಲ.

ಬಯಲುಸೀಮೆ ಹಾಗಿರಲಿ, ಮಳೆಗೆ ಹೆಸರುವಾಸಿಯಾದ ಮಲೆನಾಡಲ್ಲೂ ಮಳೆ ಅಪರೂಪಕ್ಕೆ ಬರುವ ಅತಿಥಿಯಾಗಿದೆ. 'ಮಲೆನಾಡಿಗೆ ಅದೇನು ಗರ ಬಡಿದಿದೆಯೋ? ಭತ್ತದ ಕಳೆ ತೆಗೆದು ಮನೆಗೆ ಬಂದು ಕೈ ತೊಳೆಯೋ ಪರಿಸ್ಥಿತಿ ಬಂದಿದೆ. ಗದ್ದೆ ಸುತ್ತಮುತ್ತ ಒಂಚೂರು ನೀರು ಸಿಗಲ್ಲ' ಎಂದು ಸೊರಬದ ಕಾನಬೈಲಿನ ಹಾಲಮ್ಮ ಅವಲತ್ತುಕೊಳ್ಳುತ್ತಾರೆ. ಬೇಸಿಗೆಯಲ್ಲಿ ಅಡಿಕೆ ತೋಟಗಳನ್ನು ಉಳಿಸಿಕೊಳ್ಳುವುದು ಸವಾಲಿನ ಕೆಲಸವಾಗಿದೆ. ಬೇಸಿಗೆಯಲ್ಲಿ ಕುಡಿಯಲಿಕ್ಕೆ ನೀರು ಸಿಗುವುದೂ ಕೂಡ ಕಷ್ಟವಾಗಿದೆ. ಬಿಸಿಲಿನ ಝಳ, ಸೆಕೆಯ ಧಗೆ ಮಲೆನಾಡನ್ನೂ ಬಿಡದಂತೆ ಕಾಡುತ್ತಿದೆ.

ಅರೆಮಲೆನಾಡು ಪ್ರದೇಶವಾದ ಧಾರವಾಡ ಜಿಲ್ಲೆಯೂ ಈ ಬಿಕ್ಕಟ್ಟಿಗೆ ಹೊರತಾಗಿಲ್ಲ. 'ಮಳೆಗಾಲದ ಆ ವೈಭವ ನೋಡದೇ ಹತ್ತು–ಹದಿನೈದು ವರ್ಷಗಳಾದವು' ಎಂದು ಹಳಹಳಿಸುತ್ತಾರೆ, ಕೃಷಿಕ ಹಾಗೂ ವೈದ್ಯ ಡಾ. ಸಂಜೀವ ಕುಲಕರ್ಣಿ. ತಮ್ಮ 'ಸುಮನ ಸಂಗಮ' ತೋಟದಲ್ಲಿನ ಐದು ಸರಣಿ ಕೆರೆಗಳು ತುಂಬದೇ ವರ್ಷಗಳೇ ಕಳೆದಿವೆ ಎನ್ನುತ್ತಾರೆ ಅವರು. 'ಮೋಡಗಳ ಸಾಲು ಧಾರವಾಡದತ್ತ ಧಾವಿಸಿ ಬರುವುದನ್ನು ನಮ್ಮ ತೋಟದಲ್ಲಿ ನಿಂತು ನೋಡಬಹುದಿತ್ತು. ಆದರೆ ಆ ಚೆಂದದ ನೋಟ ದೂರವಾಗಿ ದಶಕವೇ ಕಳೆಯಿತು' ಎಂಬ ವಿಷಾದದ ನುಡಿ ಅವರದು.

'ಮಳೆ ಅವಧಿ ಸ್ಥಿತ್ಯಂತರವಾಗಿರುವುದು ಕೃಷಿ